**Re.No. D. 221**


# भारत का राजपत्र
# The Gazette of India

# ಭಾರತ ರಾಜಪತ್ರ

**(Extraordinary)**

(ವಿಶೇಷ ಸಂಚಿಕೆ)

**भाग IX अनुभाग 1**

**PART IX SECTION 1**

**ಭಾಗ IX ವಿಭಾಗ 1**

**प्राधिकार से प्रकाशित**

**Published by Authority**

**ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ**

| | | |
|---|---|---|
| सं 1, नई दिल्ली, बुधवार, 07 जून, 2023 | ज्येष्ठ 19, 1945 (शक) | खंड.54 |
| No.1, New Delhi, Wednesday, June 07, 2023 | Jyeshtha 19, 1945 (saka) | Vol. 54 |
| ನಂ.1, ನವದೆಹಲಿ, ಬುಧವಾರ, ಜೂನ್ 07, 2023 | ಜ್ಯೇಷ್ಠ 19, 1945 (ಶಕ) | ಸಂಪುಟ.54 |


**Ministry of Law and Justice**

(Legislative Department)

New Delhi, 07th June, 2023

**ಕಾನೂನು ಮತ್ತು ನ್ಯಾಯ ಮಂತ್ರಾಲಯ**

**(ವಿಧಾಯೀ ಇಲಾಖೆ)**

**ನವದೆಹಲಿ, 07ನೇ ಜೂನ್, 2023**

The Translation in Kannada of the following Acts, namely:- (1) THE CENTRAL GOODS AND SERVICES TAX ACT, 2017 (No. 12 of 2017) (2) THE GOODS AND SERVICES TAX (COMPENSATION TO STATES) ACT, 2017 (No. 15 of 2017) (3) THE ESSENTIAL DEFENCE SERVICES ACT, 2021 (No. 25 of 2021) -are hereby published under the authority of the President and shall be deemed to be authoritative text thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು ಎಂದರೆ:– (1) ಕೇಂದ್ರ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 (2017ರ ಸಂಖ್ಯೆ 12) (2) ಸರಕುಗಳ ಮತ್ತು ಸೇವೆಗಳ ತೆರಿಗೆ (ರಾಜ್ಯಗಳಿಗೆ ನಷ್ಟಪರಿಹಾರ) ಅಧಿನಿಯಮ, 2017 (2017 ರ ಸಂಖ್ಯೆ 15) (3) ಅತ್ಯಾವಶ್ಯಕ ರಕ್ಷಣಾ ಸೇವೆಗಳ ಅಧಿನಿಯಮ, 2021 (2021ರ ಸಂಖ್ಯೆ 25) – ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973 ರ 50) ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇದನ್ನು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

# ಅತ್ಯಾವಶ್ಯಕ ರಕ್ಷಣಾ ಸೇವೆಗಳ ಅಧಿನಿಯಮ, 2021

## (2021ರ ಸಂಖ್ಯೆ 25)

[11ನೇ ಆಗಸ್ಟ್, 2021.]

ರಾಷ್ಟ್ರದ ಮತ್ತು ಒಟ್ಟಾರೆ ಜನಜೀವನದ ಮತ್ತು ಸ್ವತ್ತಿನ ಭದ್ರತೆಯನ್ನು ಸುನಿಶ್ಚಿತಪಡಿಸುವ ಸಲುವಾಗಿ ಅತ್ಯಾವಶ್ಯಕ ರಕ್ಷಣಾ ಸೇವೆಗಳನ್ನು ನಿರ್ವಹಿಸುವ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗೆ ಉಪಬಂಧ ಕಲ್ಪಿಸುವ ಒಂದು ಅಧಿನಿಯಮ.

ಇದು ಭಾರತ ಗಣರಾಜ್ಯದ ಎಪ್ಪತ್ತೆರಡನೇ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:–

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**– (1) ಈ ಅಧಿನಿಯಮವನ್ನು ಅತ್ಯಾವಶ್ಯಕ ರಕ್ಷಣಾ ಸೇವೆಗಳ ಅಧಿನಿಯಮ, 2021 ಎಂದು ಕರೆಯತಕ್ಕದ್ದು.

(2) ಇದು, ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು, ಜೂನ್ 30, 2021ರಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

(4) ಈ ಅಧಿನಿಯಮದ ಪ್ರವರ್ತನೆಯು ನಿಂತುಹೋಗುವ ಮೊದಲು ಮಾಡಲಾದ ಅಥವಾ ಮಾಡದೆ ಉಳಿದ ಕಾರ್ಯಗಳಿಗೆ ಸಂಬಂಧಿಸಿದಂತೆ ಹೊರತು, ಈ ಅಧಿನಿಯಮಕ್ಕೆ ರಾಷ್ಟ್ರಪತಿಯು ಅಂಕಿತ ಹಾಕಿದ ದಿನಾಂಕದಿಂದ ಒಂದು ವರ್ಷ ಮುಕ್ತಾಯವಾದ ಮೇಲೆ ಈ ಅಧಿನಿಯಮವು ಪರಿಣಾಮಕಾರಿಯಾಗಿರುವುದು ನಿಂತುಹೋಗತಕ್ಕದ್ದು ಮತ್ತು ಈ ಅಧಿನಿಯಮವನ್ನು ಕೇಂದ್ರ ಅಧಿನಿಯಮದ ಮೂಲಕ ನಿರಸನಗೊಳಿಸಿದ್ದರೆ ಹೇಗೋ ಹಾಗೆ, ಅದರ ಪ್ರವರ್ತನೆಯು ನಿಂತುಹೋದ ತರುವಾಯ ಸಾಮಾನ್ಯ ಖಂಡಗಳ ಅಧಿನಿಯಮ, 1897 (1897ರ 10)ರ ಪ್ರಕರಣ 6 ಅನ್ವಯವಾಗತಕ್ಕದ್ದು.

**2. ಪರಿಭಾಷೆಗಳು.**– (1) ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಅತ್ಯಾವಶ್ಯಕ ರಕ್ಷಣಾ ಸೇವೆಗಳು" ಎಂದರೆ:–

(i) ರಕ್ಷಣೆಗೆ ಸಂಬಂಧಿಸಿದ ಯಾವುದೇ ಉದ್ದೇಶಕ್ಕಾಗಿ ಅಗತ್ಯವಾದ ಸರಕುಗಳು ಅಥವಾ ಸಾಧನ-ಸಾಮಗ್ರಿಯ ಉತ್ಪಾದನೆಯೊಂದಿಗೆ ವ್ಯವಹರಿಸುವ ಯಾವುದೇ ಕಾರ್ಯಸಂಸ್ಥೆ ಅಥವಾ ಉದ್ಯಮದಲ್ಲಿನ ಯಾವುದೇ ಸೇವೆ;

(ii) ಒಕ್ಕೂಟದ ಸಶಸ್ತ್ರ ಪಡೆಗಳ ಅಥವಾ ಅವುಗಳಿಗೆ ಸಂಬಂಧಪಟ್ಟ ಯಾವುದೇ ಕಾರ್ಯಸಂಸ್ಥೆಯಲ್ಲಿನ ಅಥವಾ ರಕ್ಷಣೆಗೆ ಸಂಬಂಧಪಟ್ಟ ಇತರ ಯಾವುದೇ ಕಾರ್ಯಸಂಸ್ಥೆ ಅಥವಾ ಪ್ರತಿಷ್ಠಾಪನೆಯಲ್ಲಿನ ಯಾವುದೇ ಸೇವೆ;

(iii) ರಕ್ಷಣೆಗೆ ಸಂಬಂಧಪಟ್ಟ ಯಾವುದೇ ಕಾರ್ಯಸಂಸ್ಥೆಯ ಅಥವಾ ಅದರಲ್ಲಿ ನಿಯೋಜಿತರಾದ ನೌಕರರ ಸುರಕ್ಷತೆಯು ಅವಲಂಬಿತವಾಗಿರುವ ಅಂಥ ಕಾರ್ಯಸಂಸ್ಥೆಯ ಯಾವುದೇ ವಿಭಾಗದಲ್ಲಿನ ಯಾವುದೇ ಸೇವೆ;

(iv) ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಅತ್ಯಾವಶ್ಯಕ ರಕ್ಷಣಾ ಸೇವೆಗಳೆಂದು ಘೋಷಿಸಬಹುದಾದ ಸೇವೆಗಳ ಕಾರ್ಯನಿರ್ವಹಣೆಯು ನಿಂತು ಹೋದರೆ,–

(I) ರಕ್ಷಣಾ ಸಾಧನ–ಸಾಮಗ್ರಿ ಅಥವಾ ಸರಕುಗಳ ಉತ್ಪಾದನೆಗೆ; ಅಥವಾ

(II) ರಕ್ಷಣೆಗೆ ಸಂಬಂಧಪಟ್ಟ ಯಾವುದೇ ಉದ್ದೇಶಕ್ಕಾಗಿ ಅಗತ್ಯವಾದ ಸರಕುಗಳು ಅಥವಾ ಸಾಧನ–ಸಾಮಗ್ರಿಯ ಉತ್ಪಾದನೆಯಲ್ಲಿ ತೊಡಗಿರುವ ಯಾವುದೇ ಕೈಗಾರಿಕಾ ಕಾರ್ಯಸಂಸ್ಥೆ ಅಥವಾ ಘಟಕದ ಕಾರ್ಯಾಚರಣೆ ಅಥವಾ ನಿರ್ವಹಣೆಗೆ; ಅಥವಾ

(III) ರಕ್ಷಣೆಗೆ ಸಂಬಂಧಪಟ್ಟ ಉತ್ಪನ್ನಗಳ ದುರಸ್ತಿ ಅಥವಾ ನಿರ್ವಹಣೆಗೆ

– ಪ್ರತಿಕೂಲ ಪರಿಣಾಮ ಬೀರುವಂಥ ಇತರ ಯಾವುದೇ ಸೇವೆ;

(ಬಿ) "ಮುಷ್ಕರ" ಎಂದರೆ, ಅತ್ಯಾವಶ್ಯಕ ರಕ್ಷಣಾ ಸೇವೆಗಳಲ್ಲಿ ತೊಡಗಿರುವ ವ್ಯಕ್ತಿಗಳ ನಿಕಾಯವು ಒಟ್ಟಾಗಿ ವರ್ತಿಸುವ ಮೂಲಕ ಕೆಲಸವನ್ನು ನಿಲ್ಲಿಸುವುದು, ನಿಧಾನವಾಗಿ ಕೆಲಸ ಮಾಡುವುದು, ಧರಣಿ ಕೂರುವುದು, ಒಳಗಡೆಯೇ ಉಳಿಯುವುದು, ಸಾಂಕೇತಿಕ ಮುಷ್ಕರ, ಸಹಾನುಭೂತಿ ಮುಷ್ಕರ ಅಥವಾ ಸಾಮೂಹಿಕ ಸಾಂದರ್ಭಿಕ ರಜೆ ಹಾಕುವುದು ಅಥವಾ ಹಾಗೆ ತೊಡಗಿರುವ ಅಥವಾ ತೊಡಗಿಸಿಕೊಳ್ಳಲಾಗಿರುವ ಎಷ್ಟೇ ಸಂಖ್ಯೆಯ ವ್ಯಕ್ತಿಗಳು, ಕೆಲಸವನ್ನು ಮುಂದುವರೆಸಲು ಅಥವಾ ನಿಯೋಜನೆಯನ್ನು ಒಪ್ಪಿಕೊಳ್ಳಲು ಏಕೋದ್ದೇಶದ ನಿರಾಕರಣೆ ಅಥವಾ ಸಾಮಾನ್ಯ ತಿಳುವಳಿಕೆ ಮೇರೆಗೆ ನಿರಾಕರಣೆ ಮತ್ತು,-

(i) ಅತ್ಯಾವಶ್ಯಕ ರಕ್ಷಣಾ ಸೇವೆಗಳ ನಿರ್ವಹಣೆಗಾಗಿ ಅವಶ್ಯವಾಗಿರುವಂಥ ಕಾರ್ಯವನ್ನು ಮಾಡುವುದಕ್ಕಾಗಿ ಕೆಲಸದ ಅವಧಿ ಮೀರಿ ಕಾರ್ಯನಿರ್ವಹಿಸಲು ನಿರಾಕರಿಸುವುದು;

(ii) ಅತ್ಯಾವಶ್ಯಕ ರಕ್ಷಣಾ ಸೇವೆಗಳಲ್ಲಿನ ಕೆಲಸದ ಸಮಾಪ್ತಿಗೆ ಅಥವಾ ವಿಳಂಬಕ್ಕೆ ಅಥವಾ ಅಡಚಣೆಗೆ ಕಾರಣವಾಗುವಂಥ ಅಥವಾ ಕಾರಣವಾಗುವ ಸಂಭವವಿರುವಂಥ ಇತರ ಯಾವುದೇ ವರ್ತನೆ

– ಒಳಗೊಳ್ಳುತ್ತದೆ.

(2) ಈ ಅಧಿನಿಯಮದಲ್ಲಿ ಬಳಸಿರುವ ಮತ್ತು ಪರಿಭಾಷಿಸಿರದ, ಆದರೆ ಕೈಗಾರಿಕಾ ವಿವಾದಗಳ ಅಧಿನಿಯಮ, 1947 (1947ರ 14)ರಲ್ಲಿ ಪರಿಭಾಷಿಸಿರುವ ಪದಗಳು ಮತ್ತು ಪದಾವಳಿಗಳು ಆ ಅಧಿನಿಯಮದಲ್ಲಿ ಅವುಗಳಿಗೆ ಅನುಕ್ರಮವಾಗಿ ನೀಡಿರುವ ಅರ್ಥಗಳನ್ನೇ ಹೊಂದಿರತಕ್ಕದ್ದು.

**3. ಅತ್ಯಾವಶ್ಯಕ ರಕ್ಷಣಾ ಸೇವೆಗಳಲ್ಲಿ ಮುಷ್ಕರಗಳನ್ನು ನಿಷೇಧಿಸುವ ಅಧಿಕಾರ.**– (1) ಕೇಂದ್ರ ಸರ್ಕಾರವು,–

(ಎ) ಸಾರ್ವಜನಿಕ ಹಿತಾಸಕ್ತಿ; ಅಥವಾ

(ಬಿ) ಭಾರತದ ಸಾರ್ವಭೌಮತೆ ಮತ್ತು ಅಖಂಡತೆಯ ಹಿತಾಸಕ್ತಿ; ಅಥವಾ

(ಸಿ) ಯಾವುದೇ ರಾಜ್ಯದ ಭದ್ರತೆ; ಅಥವಾ

(ಡಿ) ಸಾರ್ವಜನಿಕ ಸುವ್ಯವಸ್ಥೆ; ಅಥವಾ

(ಇ) ಸಭ್ಯತೆ; ಅಥವಾ

(ಎಫ್) ನೈತಿಕತೆ

– ದೃಷ್ಟಿಯಿಂದ ಮುಷ್ಕರಗಳನ್ನು ನಿಷೇಧಿಸುವುದು ಅವಶ್ಯಕ ಅಥವಾ ವಿಹಿತವೆಂದು ಮನವರಿಕೆಯಾದರೆ, ಅದು, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಅತ್ಯಾವಶ್ಯಕ ರಕ್ಷಣಾ ಸೇವೆಗಳಲ್ಲಿ ಮುಷ್ಕರಗಳನ್ನು ನಿಷೇಧಿಸಬಹುದು.

(2) ಉಪಪ್ರಕರಣ (1)ರ ಮೇರೆಗೆ ಮಾಡಲಾದ ಆದೇಶವನ್ನು, ಅಂಥ ಆದೇಶದಿಂದ ಬಾಧಿತರಾಗುವ ವ್ಯಕ್ತಿಗಳ ಗಮನಕ್ಕೆ ತರಲು, ಕೇಂದ್ರ ಸರ್ಕಾರವು ಸೂಕ್ತವೆಂದು ಭಾವಿಸಬಹುದಾದಂಥ ರೀತಿಯಲ್ಲಿ ಪ್ರಕಟಿಸತಕ್ಕದ್ದು.

(3) ಉಪಪ್ರಕರಣ (1)ರ ಮೇರೆಗೆ ಮಾಡಲಾದ ಆದೇಶವು ಆರು ತಿಂಗಳವರೆಗೆ ಜಾರಿಯಲ್ಲಿರತಕ್ಕದ್ದು, ಆದರೆ ಕೇಂದ್ರ ಸರ್ಕಾರವು, ಸಾರ್ವಜನಿಕ ಹಿತದೃಷ್ಟಿಯಿಂದ ಜಾರಿ ಅವಧಿಯನ್ನು ವಿಸ್ತರಿಸುವುದು ಅವಶ್ಯಕ ಅಥವಾ ವಿಹಿತವೆಂದು ಮನಗಂಡರೆ ಅಂಥದೇ ಆದೇಶದ ಮೂಲಕ, ಅದನ್ನು ಆರು ತಿಂಗಳಿಗೆ ಮೀರದ ಯಾವುದೇ ಅವಧಿಯವರೆಗೆ ವಿಸ್ತರಿಸಬಹುದು.

(4) ಉಪಪ್ರಕರಣ (1)ರ ಮೇರೆಗೆ ಮಾಡಲಾದ ಆದೇಶವನ್ನು ಹೊರಡಿಸಿದ ತರುವಾಯ,–

(ಎ) ಅತ್ಯಾವಶ್ಯಕ ರಕ್ಷಣಾ ಸೇವೆಗಳಲ್ಲಿ ತೊಡಗಿರುವ ಯಾರೇ ವ್ಯಕ್ತಿಯು ಮುಷ್ಕರ ಮಾಡತಕ್ಕದ್ದಲ್ಲ ಅಥವಾ ಮುಷ್ಕರದಲ್ಲಿ ಉಳಿಯತಕ್ಕದ್ದಲ್ಲ;

(ಬಿ) ಅಂಥ ಆದೇಶವನ್ನು ಹೊರಡಿಸುವ ಮುಂಚೆಯಾಗಲೀ ಅಥವಾ ನಂತರವಾಗಲೀ, ಅಂಥ ಸೇವೆಗಳಲ್ಲಿ ತೊಡಗಿರುವ ಅಥವಾ ನಿಯೋಜಿತರಾಗಿರುವ ವ್ಯಕ್ತಿಗಳು ಘೋಷಿಸಿದ ಅಥವಾ ಪ್ರಾರಂಭಿಸಿದ ಯಾವುದೇ ಮುಷ್ಕರವು ಕಾನೂನುಬಾಹಿರವಾಗತಕ್ಕದ್ದು.

**4. ವ್ಯಕ್ತಿಗಳನ್ನು ಹೊರ ಹಾಕುವುದು.–** ಪ್ರಕರಣ 3ರ ಉಪಪ್ರಕರಣ (1)ರ ಮೇರೆಗೆ ಯಾವುದೇ ಆದೇಶವನ್ನು ಹೊರಡಿಸಿರುವಲ್ಲಿ, ಯಾರೇ ಪೊಲೀಸ್ ಅಧಿಕಾರಿಯು,–

(ಎ) ರಕ್ಷಣಾ ಸಾಧನ–ಸಾಮಗ್ರಿಯ ಉತ್ಪಾದನಾ ಸೇವೆಗಳಿಗೆ; ಅಥವಾ

(ಬಿ) ರಕ್ಷಣೆಗೆ ಸಂಬಂಧಿಸಿದ ಯಾವುದೇ ಉದ್ದೇಶಕ್ಕಾಗಿ ಅಗತ್ಯವಾದ ಸರಕುಗಳು ಅಥವಾ ಸಾಧನ-ಸಾಮಗ್ರಿಯ ಉತ್ಪಾದನೆಯಲ್ಲಿ ಅಥವಾ ತಯಾರಿಕೆಯಲ್ಲಿ ತೊಡಗಿರುವ ಯಾವುದೇ ಕೈಗಾರಿಕಾ ಕಾರ್ಯಸಂಸ್ಥೆ ಅಥವಾ ಘಟಕದ ಕಾರ್ಯಾಚರಣೆ ಅಥವಾ ನಿರ್ವಹಣೆಗೆ; ಅಥವಾ

(ಸಿ) ಅತ್ಯಾವಶ್ಯಕ ರಕ್ಷಣಾ ಸೇವೆಗಳ ಕಾರ್ಯನಿರ್ವಹಣೆಗೆ, ಸುರಕ್ಷತೆಗೆ ಅಥವಾ ನಿರ್ವಹಣೆಗೆ ಪ್ರತಿಕೂಲವಾಗಿ ಪರಿಣಮಿಸುವಂಥ, ರಕ್ಷಣೆಗೆ ಸಂಬಂಧಿಸಿದ ಉತ್ಪನ್ನಗಳ ದುರಸ್ತಿ ಅಥವಾ ನಿರ್ವಹಣೆಗೆ

– ಸಂಬಂಧಿಸಿದ ಯಾವುದೇ ಪ್ರದೇಶದಲ್ಲಿ ಉಪಸ್ಥಿತನಿರುವ ಯಾರೇ ವ್ಯಕ್ತಿಯನ್ನು ಹೊರಹಾಕುವುದು, ತಾನು ಅವಶ್ಯವೆಂದು ಪರಿಗಣಿಸಿದರೆ, ಪೊಲೀಸ್ ಬಲವನ್ನು ಪ್ರಯೋಗಿಸುವುದು ಸೇರಿದಂತೆ, ಅಂಥ ಅಧಿಕಾರಿಯು ಸೂಕ್ತವೆಂದು ಭಾವಿಸಬಹುದಾದಂಥ ಎಲ್ಲಾ ಕ್ರಮಗಳನ್ನು ಕೈಗೊಳ್ಳಬಹುದು.

**5. ಕಾನೂನುಬಾಹಿರ ಮುಷ್ಕರಗಳಲ್ಲಿ ಭಾಗವಹಿಸುವ ಉದ್ಯೋಗಿಗಳನ್ನು ವಜಾ ಮಾಡುವುದು.**– (1) ಯಾರೇ ವ್ಯಕ್ತಿಯು,–

(ಎ) ಈ ಅಧಿನಿಯಮದ ಮೇರೆಗೆ ಕಾನೂನುಬಾಹಿರವಾಗಿರುವಂಥ ಮುಷ್ಕರವನ್ನು ಪ್ರಾರಂಭಿಸಿದರೆ ಅಥವಾ ಯಾವುದೇ ಅಂಥ ಮುಷ್ಕರಕ್ಕೆ ಹೊರಟರೆ ಅಥವಾ ಅದರಲ್ಲಿ ಉಳಿದರೆ ಅಥವಾ ಅನ್ಯಥಾ ಪಾಲ್ಗೊಂಡರೆ; ಅಥವಾ

(ಬಿ) ಯಾವುದೇ ಅಂಥ ಮುಷ್ಕರವನ್ನು ಪ್ರಾರಂಭಿಸಲು ಅಥವಾ ಮುಷ್ಕರಕ್ಕೆ ಹೊರಡಲು ಅಥವಾ ಅದರಲ್ಲಿ ಉಳಿಯಲು ಅಥವಾ ಅನ್ಯಥಾ ಪಾಲ್ಗೊಳ್ಳಲು ಇತರ ವ್ಯಕ್ತಿಗಳನ್ನು ಪ್ರಚೋದಿಸಿದರೆ ಅಥವಾ ಪ್ರೇರೇಪಿಸಿದರೆ, ಅವನ ನಿಯೋಜನೆಗೆ ಸಂಬಂಧಪಟ್ಟಂತೆ ಅವನಿಗೆ ಅನ್ವಯವಾಗುವ ಸೇವಾ ನಿಬಂಧನೆಗಳು ಮತ್ತು ಷರತ್ತುಗಳ ಮೇರೆಗೆ, ಯಾವುದೇ ಇತರ ಕಾರಣದ ಮೇಲೆ ಶಿಸ್ತು ಕ್ರಮವನ್ನು (ವಜಾವಣೆ ಸೇರಿದಂತೆ) ತೆಗೆದುಕೊಳ್ಳುವ ಉದ್ದೇಶಕ್ಕಾಗಿ ಅನ್ವಯವಾಗುವಂಥ ಉಪಬಂಧಗಳಿಗೆ ಅನುಸಾರವಾಗಿ ಅವನು (ವಜಾವಣೆಯೂ ಸೇರಿದಂತೆ) ಶಿಸ್ತು ಕ್ರಮಕ್ಕೆ ಗುರಿಯಾಗತಕ್ಕದ್ದು.

(2) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದಾಗ್ಯೂ ಅಥವಾ ಅತ್ಯಾವಶ್ಯಕ ರಕ್ಷಣಾ ಸೇವೆಗಳಲ್ಲಿ ನಿಯೋಜನೆಗೊಂಡಿರುವ ಯಾರೇ ವ್ಯಕ್ತಿಗೆ ಅನ್ವಯವಾಗುವ ಸೇವಾ ನಿಬಂಧನೆಗಳು ಮತ್ತು ಷರತ್ತುಗಳ ಮೇರೆಗೆ, ಉಪಪ್ರಕರಣ (1)ರ ಮೇರೆಗೆ ಯಾರೇ ವ್ಯಕ್ತಿಯನ್ನು ವಜಾ ಮಾಡುವುದಕ್ಕೆ ಮುಂಚೆ, ಅಂಥ ವ್ಯಕ್ತಿಯನ್ನು ವಜಾ ಮಾಡುವುದಕ್ಕೆ ಅಥವಾ ತೆಗೆದು ಹಾಕುವುದಕ್ಕೆ ಅಧಿಕಾರ ಹೊಂದಿರುವ ಪ್ರಾಧಿಕಾರವು ಬರವಣಿಗೆಯಲ್ಲಿ ದಾಖಲಿಸಬೇಕಾದ ಯಾವುದಾದರೂ ಕಾರಣಕ್ಕಾಗಿ ವಿಚಾರಣೆ ನಡೆಸುವುದು ಯುಕ್ತವಾಗಿ ಕಾರ್ಯಸಾಧ್ಯವಾದುದಲ್ಲವೆಂದು ತನಗೆ ಮನವರಿಕೆಯಾದರೆ, ಯಾವುದೇ ವಿಚಾರಣೆ ಅಗತ್ಯವಾಗಿರತಕ್ಕದ್ದಲ್ಲ.

**6. ಕಾನೂನುಬಾಹಿರ ಮುಷ್ಕರಗಳಿಗೆ ದಂಡ.**– ಈ ಅಧಿನಿಯಮದ ಮೇರೆಗೆ ಕಾನೂನುಬಾಹಿರವಾದಂಥ ಮುಷ್ಕರವನ್ನು ಪ್ರಾರಂಭಿಸುವ ಅಥವಾ ಅಂಥ ಯಾವುದೇ ಮುಷ್ಕರಕ್ಕೆ ಹೊರಡುವ ಅಥವಾ ಅದರಲ್ಲಿ ಉಳಿಯುವ ಅಥವಾ ಅನ್ಯಥಾ

ಪಾಲ್ಗೊಳ್ಳುವ ಯಾರೇ ವ್ಯಕ್ತಿಯು, ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

**7. ಪ್ರಚೋದನೆ, ಇತ್ಯಾದಿಗಾಗಿ ದಂಡ.–** ಈ ಅಧಿನಿಯಮದ ಮೇರೆಗೆ ಕಾನೂನುಬಾಹಿರವಾದ ಮುಷ್ಕರದಲ್ಲಿ ಭಾಗವಹಿಸುವಂತೆ ಅಥವಾ ಅದನ್ನು ಮುಂದುವರಿಸುವಂತೆ ಇತರರನ್ನು ಪ್ರಚೋದಿಸುವ ಅಥವಾ ಪ್ರೇರೇಪಿಸುವ ಯಾರೇ ವ್ಯಕ್ತಿಯು, ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಹದಿನೈದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

**8. ಕಾನೂನುಬಾಹಿರ ಮುಷ್ಕರಗಳಿಗೆ ಹಣಕಾಸಿನ ನೆರವು ನೀಡುವುದಕ್ಕಾಗಿ ದಂಡ.–** ಯಾರೇ ವ್ಯಕ್ತಿಯು, ಈ ಅಧಿನಿಯಮದ ಮೇರೆಗೆ ಮುಷ್ಕರವು ಕಾನೂನುಬಾಹಿರವಾಗಿದೆಯೆಂದು ಗೊತ್ತಿದ್ದು ಅದರ ಮುಂದುವರಿಕೆಗೆ ಅಥವಾ ಅದನ್ನು ಬೆಂಬಲಿಸಿ ಯಾವುದೇ ಹಣವನ್ನು ಖರ್ಚು ಮಾಡಿದರೆ ಅಥವಾ ಪೂರೈಸಿದರೆ ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಹದಿನೈದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

**9. ಅತ್ಯಾವಶ್ಯಕ ರಕ್ಷಣಾ ಸೇವೆಗಳಲ್ಲಿ ತೊಡಗಿರುವ ಯಾವುದೇ ಕೈಗಾರಿಕಾ ಕಾರ್ಯಸಂಸ್ಥೆ ಅಥವಾ ಘಟಕದಲ್ಲಿ ಬೀಗಮುದ್ರೆ ಮಾಡುವುದನ್ನು ನಿಷೇಧಿಸಲು ಅಧಿಕಾರ.–** (1) ಕೇಂದ್ರ ಸರ್ಕಾರವು,–

(ಎ) ಸಾರ್ವಜನಿಕ ಹಿತಾಸಕ್ತಿ; ಅಥವಾ

(ಬಿ) ಭಾರತದ ಸಾರ್ವಭೌಮತೆ ಮತ್ತು ಅಖಂಡತೆಯ ಹಿತಾಸಕ್ತಿ; ಅಥವಾ

(ಸಿ) ಯಾವುದೇ ರಾಜ್ಯದ ಭದ್ರತೆ; ಅಥವಾ

(ಡಿ) ಸಾರ್ವಜನಿಕ ಸುವ್ಯವಸ್ಥೆ; ಅಥವಾ

(ಇ) ಸಭ್ಯತೆ; ಅಥವಾ

(ಎಫ್) ನೈತಿಕತೆ

– ದೃಷ್ಟಿಯಿಂದ ಅತ್ಯಾವಶ್ಯಕ ರಕ್ಷಣಾ ಸೇವೆಗಳಲ್ಲಿ ಬೀಗಮುದ್ರೆ ಮಾಡುವುದನ್ನು ನಿಷೇಧಿಸುವುದು ಅವಶ್ಯ ಅಥವಾ ವಿಹಿತವೆಂದು ಮನಗಂಡರೆ, ಅದು, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಬೀಗಮುದ್ರೆ ಮಾಡುವುದನ್ನು ಪ್ರತಿಷೇಧಿಸಬಹುದು.

(2) ಉಪಪ್ರಕರಣ (1)ರ ಮೇರೆಗೆ ಮಾಡಲಾದ ಆದೇಶವನ್ನು, ಅಂಥ ಆದೇಶದಿಂದ ಬಾಧಿತರಾಗುವ ವ್ಯಕ್ತಿಗಳ ಗಮನಕ್ಕೆ ತರಲು, ಕೇಂದ್ರ ಸರ್ಕಾರವು ಸೂಕ್ತವೆಂದು ಭಾವಿಸಬಹುದಾದಂಥ ರೀತಿಯಲ್ಲಿ ಪ್ರಕಟಿಸತಕ್ಕದ್ದು.

(3) ಉಪಪ್ರಕರಣ (1)ರ ಮೇರೆಗೆ ಮಾಡಲಾದ ಆದೇಶವು ಆರು ತಿಂಗಳ ಕಾಲ ಜಾರಿಯಲ್ಲಿರತಕ್ಕದ್ದು, ಆದರೆ ಕೇಂದ್ರ ಸರ್ಕಾರವು, ಸಾರ್ವಜನಿಕ ಹಿತದೃಷ್ಟಿಯಿಂದ ಜಾರಿ ಅವಧಿಯನ್ನು ವಿಸ್ತರಿಸುವುದು ಅವಶ್ಯಕವೆಂದು ಮನಗಂಡರೆ, ಅಂಥದೇ ಆದೇಶದ ಮೂಲಕ, ಅದನ್ನು ಆರು ತಿಂಗಳಿಗೆ ಮೀರದ ಯಾವುದೇ ಅವಧಿಯವರೆಗೆ ವಿಸ್ತರಿಸಬಹುದು.

(4) ಉಪಪ್ರಕರಣ (1)ರ ಮೇರೆಗೆ ಮಾಡಲಾದ ಆದೇಶವನ್ನು ಹೊರಡಿಸಿದ ತರುವಾಯ,–

(ಎ) ಅತ್ಯಾವಶ್ಯಕ ರಕ್ಷಣಾ ಸೇವೆಗಳಲ್ಲಿ ತೊಡಗಿರುವ ಯಾರೇ ನಿಯೋಜಕನು ಯಾವುದೇ ಬೀಗಮುದ್ರೆ ಮಾಡುವುದನ್ನು ಜಾರಿಗೊಳಿಸತಕ್ಕದ್ದಲ್ಲ;

(ಬಿ) ಅಂಥ ಆದೇಶವನ್ನು ಹೊರಡಿಸುವ ಮುಂಚೆಯಾಗಲೀ ಅಥವಾ ನಂತರವಾಗಲೀ, ಅತ್ಯಾವಶ್ಯಕ ರಕ್ಷಣಾ ಸೇವೆಗಳಲ್ಲಿ ತೊಡಗಿರುವ ಯಾರೇ ನಿಯೋಜಕನು ಯಾವುದೇ ಬೀಗಮುದ್ರೆ ಮಾಡುವುದನ್ನು ಘೋಷಿಸುವುದು ಅಥವಾ ಪ್ರಾರಂಭಿಸುವುದು ಕಾನೂನುಬಾಹಿರವಾಗತಕ್ಕದ್ದು.

(5) ಈ ಪ್ರಕರಣದ ಮೇರೆಗೆ ಕಾನೂನುಬಾಹಿರವಾದಂಥ ಬೀಗಮುದ್ರೆ ಮಾಡುವುದನ್ನು ಪ್ರಾರಂಭಿಸುವ, ಮುಂದುವರಿಸುವ ಅಥವಾ ಅದರ ಮುಂದುವರಿಕೆಯಲ್ಲಿ ಅನ್ಯಥಾ ಪಾತ್ರ ವಹಿಸುವಂಥ, ಅತ್ಯಾವಶ್ಯಕ ರಕ್ಷಣಾ ಸೇವೆಗಳಲ್ಲಿ ತೊಡಗಿರುವ ಯಾವುದೇ ಕೈಗಾರಿಕಾ ಕಾರ್ಯಸಂಸ್ಥೆ ಅಥವಾ ಘಟಕದ ಯಾರೇ ನಿಯೋಜಕನು, ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

**10. ಅತ್ಯಾವಶ್ಯಕ ರಕ್ಷಣಾ ಸೇವೆಗಳಲ್ಲಿ ತೊಡಗಿರುವ ಯಾವುದೇ ಕೈಗಾರಿಕಾ ಕಾರ್ಯಸಂಸ್ಥೆ ಅಥವಾ ಘಟಕದಲ್ಲಿನ ಕೆಲಸಗಾರನನ್ನು ಕೆಲಸದಿಂದ ತೆಗೆದುಹಾಕುವುದನ್ನು ನಿಷೇಧಿಸುವ ಅಧಿಕಾರ.–** (1) ಕೇಂದ್ರ ಸರ್ಕಾರವು,–

(ಎ) ಸಾರ್ವಜನಿಕ ಹಿತಾಸಕ್ತಿ; ಅಥವಾ

(ಬಿ) ಭಾರತದ ಸಾರ್ವಭೌಮತೆ ಮತ್ತು ಅಖಂಡತೆಯ ಹಿತಾಸಕ್ತಿ; ಅಥವಾ

(ಸಿ) ಯಾವುದೇ ರಾಜ್ಯದ ಭದ್ರತೆ; ಅಥವಾ

(ಡಿ) ಸಾರ್ವಜನಿಕ ಸುವ್ಯವಸ್ಥೆ; ಅಥವಾ

(ಇ) ಸಭ್ಯತೆ; ಅಥವಾ

(ಎಫ್) ನೈತಿಕತೆ

– ದೃಷ್ಟಿಯಿಂದ ತನಗೆ ಹಾಗೆ ಮಾಡುವುದು ಅವಶ್ಯಕ ಅಥವಾ ವಿಹಿತವೆಂದು ಮನವರಿಕೆಯಾದರೆ, ಅದು, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ, ಅತ್ಯಾವಶ್ಯಕ ರಕ್ಷಣಾ ಸೇವೆಗಳಲ್ಲಿ ತೊಡಗಿರುವ ಯಾವುದೇ

ಕೈಗಾರಿಕಾ ಕಾರ್ಯಸಂಸ್ಥೆ ಅಥವಾ ಘಟಕದಲ್ಲಿನ ಹಾಜರಿ ಪಟ್ಟಿಗಳಲ್ಲಿ ಹೆಸರಿರುವಂಥ ಯಾರೇ ಕೆಲಸಗಾರನನ್ನು (ಬದಲಿ ಕೆಲಸಗಾರ ಅಥವಾ ಸಾಂದರ್ಭಿಕ ಕೆಲಸಗಾರನನ್ನು ಹೊರತುಪಡಿಸಿ) ವಿದ್ಯುಚ್ಛಕ್ತಿ ಕೊರತೆ ಅಥವಾ ನೈಸರ್ಗಿಕ ವಿಕೋಪದ ಸಂದರ್ಭವನ್ನು ಹೊರತುಪಡಿಸಿ, ಯಾವುದೇ ಕಾರಣದ ಮೇಲೆ ಕೆಲಸದಿಂದ ತೆಗೆದು ಹಾಕುವುದನ್ನು ಪ್ರತಿಷೇಧಿಸಬಹುದು.

(2) ಉಪಪ್ರಕರಣ (1)ರ ಮೇರೆಗೆ ಮಾಡಲಾದ ಆದೇಶವನ್ನು, ಅಂಥ ಆದೇಶದಿಂದ ಬಾಧಿತರಾಗುವ ವ್ಯಕ್ತಿಗಳ ಗಮನಕ್ಕೆ ತರಲು, ಕೇಂದ್ರ ಸರ್ಕಾರವು ಸೂಕ್ತವೆಂದು ಭಾವಿಸಬಹುದಾದಂಥ ರೀತಿಯಲ್ಲಿ ಪ್ರಕಟಿಸತಕ್ಕದ್ದು.

(3) ಉಪಪ್ರಕರಣ (1)ರ ಮೇರೆಗೆ ಮಾಡಲಾದ ಆದೇಶವು ಆರು ತಿಂಗಳವರೆಗೆ ಜಾರಿಯಲ್ಲಿರತಕ್ಕದ್ದು, ಆದರೆ ಕೇಂದ್ರ ಸರ್ಕಾರವು, ಸಾರ್ವಜನಿಕ ಹಿತದೃಷ್ಟಿಯಿಂದ ಜಾರಿ ಅವಧಿಯನ್ನು ವಿಸ್ತರಿಸುವುದು ಅವಶ್ಯಕ ಅಥವಾ ವಿಹಿತವೆಂದು ಮನಗಂಡರೆ, ಅಂಥದೇ ಆದೇಶದ ಮೂಲಕ, ಅದನ್ನು ಆರು ತಿಂಗಳು ಮೀರದ ಯಾವುದೇ ಅವಧಿಯವರೆಗೆ ವಿಸ್ತರಿಸಬಹುದು.

(4) ಉಪಪ್ರಕರಣ (1)ರ ಮೇರೆಗೆ ಮಾಡಲಾದ ಆದೇಶವನ್ನು ಹೊರಡಿಸಿದ ತರುವಾಯ,–

(ಎ) ಅಂಥ ಆದೇಶವು ಅನ್ವಯವಾಗುವಂಥ ಕಾರ್ಯಸಂಸ್ಥೆಯ ಸಂಬಂಧದಲ್ಲಿ, ಯಾರೇ ನಿಯೋಜಕನು, ಅತ್ಯಾವಶ್ಯಕ ರಕ್ಷಣಾ ಸೇವೆಗಳಲ್ಲಿ ತೊಡಗಿರುವ ಯಾವುದೇ ಕೈಗಾರಿಕಾ ಕಾರ್ಯಸಂಸ್ಥೆ ಅಥವಾ ಘಟಕದಲ್ಲಿನ ಹಾಜರಿ ಪಟ್ಟಿಗಳಲ್ಲಿ ಹೆಸರಿರುವಂಥ ಯಾರೇ ಕೆಲಸಗಾರನನ್ನು (ಬದಲಿ ಕೆಲಸಗಾರ ಅಥವಾ ಸಾಂದರ್ಭಿಕ ಕೆಲಸಗಾರನನ್ನು ಹೊರತುಪಡಿಸಿ) ವಿದ್ಯುಚ್ಛಕ್ತಿ ಕೊರತೆ ಅಥವಾ ನೈಸರ್ಗಿಕ ವಿಕೋಪದ ಕಾರಣಕ್ಕಾಗಿ ಹೊರತು ಕೆಲಸದಿಂದ ತೆಗೆದುಹಾಕತಕ್ಕದ್ದಲ್ಲ ಅಥವಾ ಕೆಲಸದಿಂದ ತೆಗೆದು ಹಾಕುವುದನ್ನು ಮುಂದುವರಿಸತಕ್ಕದ್ದಲ್ಲ ಮತ್ತು ಅಂಥ ಯಾವುದೇ ಕೆಲಸದಿಂದ ತೆಗೆದು ಹಾಕುವಿಕೆ ಅಥವಾ ಕೆಲಸದಿಂದ ತೆಗೆದು ಹಾಕುವಿಕೆಯ ಮುಂದುವರಿಕೆಯು, ವಿದ್ಯುಚ್ಛಕ್ತಿ ಕೊರತೆ ಅಥವಾ ನೈಸರ್ಗಿಕ ವಿಕೋಪದ ಕಾರಣಕ್ಕಾಗಿ ಇರುವ ಹೊರತು, ಅದು ಕಾನೂನುಬಾಹಿರವಾಗತಕ್ಕದ್ದು;

(ಬಿ) ಖಂಡ (ಎ) ಯ ಮೇರೆಗೆ ಕಾನೂನುಬಾಹಿರವಾಗಿ ಕೆಲಸದಿಂದ ತೆಗೆದುಹಾಕಿರುವ ಕೆಲಸಗಾರನು, ಅವನನ್ನು ಕೆಲಸದಿಂದ ತೆಗೆದು ಹಾಕದಿದ್ದರೆ ಹೇಗೋ ಹಾಗೆ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಎಲ್ಲಾ ಪ್ರಯೋಜನಗಳನ್ನು ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು;

(5) ಅತ್ಯಾವಶ್ಯಕ ರಕ್ಷಣಾ ಸೇವೆಗಳಲ್ಲಿ ತೊಡಗಿರುವ ಯಾವುದೇ ಕೈಗಾರಿಕಾ ಕಾರ್ಯಸಂಸ್ಥೆ ಅಥವಾ ಘಟಕದ ಯಾರೇ ನಿಯೋಜಕನು, ಯಾರೇ ಕೆಲಸಗಾರನನ್ನು ಕೆಲಸದಿಂದ ತೆಗೆದುಹಾಕಿದರೆ ಅಥವಾ ಕೆಲಸದಿಂದ ತೆಗೆದು ಹಾಕುವುದನ್ನು ಮುಂದುವರಿಸಿದರೆ, ಅಂಥ ಕೆಲಸದಿಂದ ತೆಗೆದುಹಾಕುವಿಕೆ ಅಥವಾ ಕೆಲಸದಿಂದ ತೆಗೆದು ಹಾಕುವುದರ ಮುಂದುವರಿಕೆಯು ಈ ಪ್ರಕರಣದ ಮೇರೆಗೆ ಕಾನೂನುಬಾಹಿರವಾದುದಾಗಿದ್ದರೆ, ಆತನು ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

**11. ವಾರಂಟಿಲ್ಲದೆ ದಸ್ತಗಿರಿ ಮಾಡುವ ಅಧಿಕಾರ.–** ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಯಾರೇ ಪೊಲೀಸ್ ಅಧಿಕಾರಿಯು, ಈ ಅಧಿನಿಯಮದ ಮೇರೆಗೆ ಯಾವುದೇ ಅಪರಾಧವನ್ನು ಮಾಡಿರುವುದಾಗಿ ಯುಕ್ತವಾಗಿ ಶಂಕಿಸುವ ಯಾರೇ ವ್ಯಕ್ತಿಯನ್ನು ವಾರಂಟಿಲ್ಲದೆ ದಸ್ತಗಿರಿ ಮಾಡಬಹುದು.

**12. ಕ್ಷಿಪ್ರವಾಗಿ ಅಧಿವಿಚಾರಣೆ ಮಾಡಬೇಕಾದ ಅಪರಾಧಗಳು.–** ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಈ ಅಧಿನಿಯಮದ ಮೇರೆಗಿನ ಎಲ್ಲಾ ಅಪರಾಧಗಳನ್ನು ರಾಜ್ಯ ಸರ್ಕಾರವು ಈ ಬಗ್ಗೆ ಅಧಿಕೃತಗೊಳಿಸಿದ ಯಾರೇ ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟನು ಅಥವಾ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟನು ಕ್ಷಿಪ್ರವಾಗಿ ಅಧಿವಿಚಾರಣೆ ಮಾಡತಕ್ಕದ್ದು ಮತ್ತು ಸದರಿ ಸಂಹಿತೆಯ 262 ರಿಂದ 265ರ ವರೆಗಿನ (ಎರಡೂ ಪ್ರಕರಣಗಳು ಸೇರಿದಂತೆ) ಪ್ರಕರಣಗಳ ಉಪಬಂಧಗಳು, ಸಾಧ್ಯವಾದಷ್ಟು ಮಟ್ಟಿಗೆ ಅಂಥ ಅಧಿವಿಚಾರಣೆಗೆ ಅನ್ವಯವಾಗತಕ್ಕದ್ದು:

ಪರಂತು, ಈ ಪ್ರಕರಣದ ಮೇರೆಗೆ ಕ್ಷಿಪ್ರ ಅಧಿವಿಚಾರಣೆಯಲ್ಲಿ ಯಾವುದೇ ಅಪರಾಧಕ್ಕಾಗಿ ಅಪರಾಧ ನಿರ್ಣಯವಾದ ಸಂದರ್ಭದಲ್ಲಿ, ಅಂಥ ಮ್ಯಾಜಿಸ್ಟ್ರೇಟನು ಈ ಅಧಿನಿಯಮದ ಮೇರೆಗೆ ದಂಡನೀಯವಾದ ಅಪರಾಧಕ್ಕಾಗಿ ಯಾವುದೇ ಅವಧಿಯ ಕಾರಾವಾಸ ಶಿಕ್ಷೆಯನ್ನು ವಿಧಿಸುವುದು ಕಾನೂನುಬದ್ಧವಾಗಿರತಕ್ಕದ್ದು.

**13. ಅಪರಾಧಗಳ ಸಂಜ್ಞೇಯತೆ.–** ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗೆ ದಂಡನೀಯವಾದ ಎಲ್ಲಾ ಅಪರಾಧಗಳು ಸಂಜ್ಞೇಯ ಮತ್ತು ಜಾಮೀನು ರಹಿತವಾಗಿರತಕ್ಕದ್ದು.

**14. ಕೆಲವೊಂದು ಪ್ರದೇಶಗಳಲ್ಲಿನ ಇತರ ಕಾನೂನುಗಳ ಉಲ್ಲೇಖ.–** ಯಾವುದೇ ಪ್ರದೇಶದಲ್ಲಿ ಜಾರಿಯಲ್ಲಿರದ ಯಾವುದೇ ಕಾನೂನಿಗೆ ಅಥವಾ ಆ ಪ್ರದೇಶಕ್ಕೆ ಸಂಬಂಧಪಟ್ಟಂತೆ, ಆ ಕಾನೂನಿನ ಅಡಿಯಲ್ಲಿನ ಯಾವುದೇ ಪ್ರಾಧಿಕಾರಕ್ಕೆ ಸಂಬಂಧಿಸಿದಂತೆ ಈ ಅಧಿನಿಯಮದಲ್ಲಿ ಮಾಡಿದ ಯಾವುದೇ ಉಲ್ಲೇಖವನ್ನು, ಆ ಪ್ರದೇಶದಲ್ಲಿ ಜಾರಿಯಲ್ಲಿರುವ ಸಂವಾದಿ ಕಾನೂನಿಗೆ ಹಾಗೂ ಅಂಥ ಸಂವಾದಿ ಕಾನೂನಿನ ಅಡಿಯಲ್ಲಿನ ಸಂವಾದಿ ಪ್ರಾಧಿಕಾರಕ್ಕೆ ಸಂಬಂಧಿಸಿದ ಉಲ್ಲೇಖವೆಂಬುದಾಗಿ ಅರ್ಥೈಸತಕ್ಕದ್ದು.

**15. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ.–** ಈ ಅಧಿನಿಯಮದ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ, ಕೇಂದ್ರ ಸರ್ಕಾರದ ಅಥವಾ ಯಾರೇ ಅಧಿಕಾರಿಯ ವಿರುದ್ಧ ಯಾವುದೇ ದಾವೆಯನ್ನು, ಅಭಿಯೋಗವನ್ನು ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

**16. ಅಧಿನಿಯಮವು ಇತರ ಕಾನೂನುಗಳ ಮೇಲೆ ಅಧ್ಯಾರೋಹಿ ಪರಿಣಾಮವನ್ನು ಹೊಂದಿರುವುದು.–** ಈ ಅಧಿನಿಯಮದ ಮತ್ತು ಅದರ ಮೇರೆಗೆ ಹೊರಡಿಸಿದ ಯಾವುದೇ ಆದೇಶದ ಉಪಬಂಧಗಳು, ಕೈಗಾರಿಕಾ ವಿವಾದಗಳ ಅಧಿನಿಯಮ, 1947 (1947ರ 14) ರಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಯಾವುದೇ ಅಸಂಗತವಾದುದು ಏನೇ ಇದ್ದರೂ ಪರಿಣಾಮವನ್ನು ಹೊಂದಿರತಕ್ಕದ್ದು.

**17. 1947ರ 14ನೇ ಅಧಿನಿಯಮದ ತಿದ್ದುಪಡಿ.–** ಕೈಗಾರಿಕಾ ವಿವಾದಗಳ ಅಧಿನಿಯಮ, 1947ರ ಪ್ರಕರಣ 2ರಲ್ಲಿನ, (ಎನ್) ಖಂಡದ, (ಐಎ) ಉಪ ಖಂಡದಲ್ಲಿ, "ಅಥವಾ ಹಡಗುಕಟ್ಟೆ" ಎಂಬ ಪದಗಳ ಬದಲಿಗೆ, "ಅಥವಾ ಹಡಗುಕಟ್ಟೆ ಅಥವಾ

ಅತ್ಯಾವಶ್ಯಕ ರಕ್ಷಣಾ ಸೇವೆಗಳಲ್ಲಿ ತೊಡಗಿರುವ ಯಾವುದೇ ಕೈಗಾರಿಕಾ ಕಾರ್ಯಸಂಸ್ಥೆ ಅಥವಾ ಘಟಕ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು.

**18. ಅಧಿಸೂಚನೆಗಳನ್ನು ಸಂಸತ್ತಿನ ಮುಂದೆ ಮಂಡಿಸುವುದು.–** ಈ ಅಧಿನಿಯಮದ ಅಡಿಯಲ್ಲಿ ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯನ್ನು, ಅದನ್ನು ರಚಿಸಿದ ಅಥವಾ ಹೊರಡಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನವು ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನವು ಮುಕ್ತಾಯಗೊಳ್ಳುವುದಕ್ಕೆ ಮುಂಚೆ ಆ ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ಅಧಿಸೂಚನೆಯನ್ನು ಹೊರಡಿಸಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ಅಧಿಸೂಚನೆಯು ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರ, ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ಧತಿಯೂ ಆ ಅಧಿಸೂಚನೆಯ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

**19. ನಿರಸನ ಮತ್ತು ಉಳಿಸುವಿಕೆಗಳು.–** (1) ಅತ್ಯಾವಶ್ಯಕ ರಕ್ಷಣಾ ಸೇವೆಗಳ ಅಧ್ಯಾದೇಶ, 2021ನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸನ ಏನೇ ಇದ್ದರೂ, ಸದರಿ ಅಧ್ಯಾದೇಶದ ಉಪಬಂಧಗಳ ಮೇರೆಗೆ ಮಾಡಿದ ಯಾವುದೇ ಕಾರ್ಯವನ್ನು ಅಥವಾ ಕೈಗೊಂಡ ಯಾವುದೇ ಕ್ರಮವನ್ನು, ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆಯೆಂದು ಭಾವಿಸತಕ್ಕದ್ದು.

ಡಾ. ರೀಟಾ ವಸಿಷ್ಠ

ಭಾರತ ಸರ್ಕಾರದ ಕಾರ್ಯದರ್ಶಿ